R No KKNN 12

3-5-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಸತ್ಯವಾದಿ

ಸ್ಥಾಪಕರು ಆರಮನೆ ಓರಸ್ಪೇದಾರ್ ಎಂ. ವಿ. ಸುಬ್ಬರಾವ್

ಸಂಪಾದಕರು: ದರ್ಮಸ್ಥಳ ಜಾಂಪಣ್ಣಂತಿ ಎಂ. ಎಸ್. ಕೃಷ್ಣಯ್ಯಂಗಾರ್ | 3 ಪ.ಸ

ಸಂಧಾನ ಡಿಸಲು ರೈಲ್ವೆ ಮಂತ್ರಿಯವರ ಪ್ರಯತ್ನ

ಈ ತಿಂಗಳಿಗೆ ಅಕ್ಕಿ

ಮೇ ತಿಂಗಳನಲ್ಲಿ ವಿವಿಧ ಜಿಲ್ಲೆಗಳಿಗೆ 10,876 ಟನ್ನು ಅಕ್ಕಿ ನಿಗದಿಯನ್ನು ರಾಜ್ಯ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ ನಿಗದಿ ಮಾಡಿದೆ. ಈ ಪೈಕಿ ಮೈಸೂರು ಮತ್ತು ತುಮಕೂರು ಜಿಲ್ಲೆಗಳು ತಲಾ 200 ಟನ್ನುಗಳನ್ನು ಪಡೆಯುತ್ತವೆ

★

ಸ್ಥಿರ ಪುಸ್ತಕ ಪ್ರದರ್ಶನ

ಕನ್ನಡ ಸಾಹಿತ್ಯ ಪರಿಷತ್ತು ತಾನು ಕೈಕೊಂಡಿರುವ ಪಂಚವಾರ್ಷಿಕ ಯೋಜನೆಯಲ್ಲಿ ಸ್ಥಿರ ಪುಸ್ತಕ ಪ್ರದರ್ಶನವೊಂದನ್ನು ತೆರೆಯುವ ಕಾರ್ಯಕ್ರಮವಿದೆ. ಈ ಪ್ರದರ್ಶನವನ್ನು ಬೆಂಗಳೂರಿನಲ್ಲಿರುವ ಪರಿಷತ್ತಿನ ಸುವರ್ಣ ಮಹೋತ್ಸವ ಕಟ್ಟಡದ ಎರಡನೆಯ ಅಂತಸ್ತಿನಲ್ಲಿ ಇಡಲಾಗುವುದು.

○

ನಕ್ಸಲೀಯನ ಬಂಧನ

ಎರಡು ವರ್ಷಗಳ ಹಿಂದೆ ಜಲಪಾಯಗುರಿ ಬಂದೀಖಾನೆಯಿಂದ ಪರಾರಿ ಆದ ನಕ್ಸಲೀಯ ನಾಯಕ ಚನು ದಾಸ್ ಧುರಿಯಲ್ಲಿ ಬಂಧಿತ ರಾದರು.

★

ನೌಕರಿ ಅಪೇಕ್ಷಿತರು

ಭಾರತದ ಉದ್ಯೋಗ ವಿನಿಮಯ ಸಂಸ್ಥೆಗಳಲ್ಲಿ ಅರ್ಜಿ ಸಲ್ಲಿಸಿದ ಉದ್ಯೋಗ ಅಪೇಕ್ಷಿತರ ಸಂಖ್ಯೆ 81-82 ಲಕ್ಷ. ಈ ಲೆಕ್ಕ ಮಾರ್ಚ್ 31 ರಲ್ಲಿ ಇದ್ದುದು.

★

ಕೈಗಾರಿಕೆ ಕೆಲಸಗಾರರಲ್ಲ

ರೈಲ್ವೆ ಕೆಲಸಗಾರರನ್ನು ಕೈಗಾರಿಕೆ ಕೆಲಸಗಾರರೆಂದು ಪರಿಗಣಿಸಲು ಆಗುವದಿಲ್ಲವೆಂದು ರೈಲ್ವೆ ಮಂತ್ರಿ ಶ್ರೀ ಎಲ್ ಎನ್ ಮಿಶ್ರ ಲೋಕಸಭೆಯಲ್ಲಿ ತಿಳಿಸಿದರು.

★ ಸಂಶೋಧನೆ ಬಿಸ್ ಬಗ್ಗೆ ಸ್ಥಿರೀಯ ಸಮಿತಿ ಪರಿಶೀಲನೆ ಮಾಡುತ್ತಿದೆ ಎಂದು ನವದೆಹಲಿ ವಾರ್ತೆ

ಕೇಂದ್ರಕ್ಕೆ ಬೀಗಮುದ್ರೆ

ಅಶಾಂತ ಪರಿಸ್ಥಿತಿ ಉದ್ಭವಿಸಿದ ಕಾರಣ ಕಲ್ಲೇಕೋಟೆಯಲ್ಲಿರುವ ಮುಸ್ಲಿಂ ಲೀಗ್ ಕೇಂದ್ರಕ್ಕೆ ಪೋಲೀಸರು ಬೀಗಮುದ್ರೆ ಮಾಡಿದರು

★

ಇಂಜಕ್ಷನ್‌ನಿಂದ ಮರಣ

ಹೈದರಾಬಾದಿನ ಸಂಸ್ಥೆಯೊಂದು ತಯಾರಿಸಿದ ಇಂಜಕ್ಷನ್ ಚುಚ್ಚಿದ ಕಾರಣ ಸಿಲಾಂಗಿನಲ್ಲಿ ಮರಣ ಒಂದು ಆಗಿ, ವಿಚಾರಣೆಯ ಪೂರ್ವಭಾವಿ ಆಗಿ ಸಂಸ್ಥೆಗೆ ತಯಾರಿಕೆ ನಿಲ್ಲಿಸುವಂತೆ ಆಜ್ಞೆ ಆಗಿದೆ.

★

ಬೆಲೆ ಏರಲಿದೆ

ಮಕ್ಕಳ ಆಹಾರ ಸರಬರಾಜಿನ ಕೊರತೆ ದೇಶದಲ್ಲಿ ಇನ್ನೂ ಕೊಂಚ ಕಾಲ ಮುಂದುವರಿಯುವದು ಹಾಲಿನ ಬೆಲೆ ಏರಿಕೆಯ ದೆಸೆಯಿಂದ ಮಕ್ಕಳ ಆಹಾರ ಪದಾರ್ಥಗಳ ಬೆಲೆ ಸಧ್ಯದಲ್ಲೇ ಏರಿಕೆ ಆಗುವ ಸಂಭವವಿದೆ ಎಂದು ನವದೆಹಲಿ ವಾರ್ತೆ ತಿಳಿಸುತ್ತದೆ.

★

ಕರುಣಾನಿಧಿಯವರ ಒತ್ತಾಯ

ಮದ್ಯ ಪ್ರವೇಶಿಸಿ ರೈಲ್ವೆ ಮುಷ್ಕರ ನಿಲ್ಲುವಂತೆ ಮಾಡಬೇಕೆಂದು ತಮಿಳುನಾಡು ಮುಖ್ಯ ಮಂತ್ರಿ ಶ್ರೀ ಎಂ. ಕರುಣಾನಿಧಿಯವರು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಒತ್ತಾಯ ಮಾಡಿರುವರು.

○

★ ದೆಹಲಿ ನಲ್ಲಿ ಕೆಲಸಗಾರರು ಮುಷ್ಕರ ಹೂಡಿದರೆ, ಮಾಮೂಲಿ ನೀರು ಸರಬರಾಜು ಮುಂದುವರಿಯುವಂತೆ ನೀರು ವ್ಯವಸ್ಥೆಯನ್ನು ಸೇನೆಗೆ ವಹಿಸಿಕೆ

★ ಸಿವಿಲ್ ಪ್ರೊಸೀಜರ್ ತಿದ್ದುಪಡಿ ಮಸೂದೆಯನ್ನು ಜಂಟಿ ಪರಿಶೀಲನಾ ಸಮಿತಿಗೆ ಲೋಕಸಭೆ ಕಳಿಸಿದೆ.

ಪರೀಕ್ಷೆ ರದ್ದು

ಅವಶ್ಯಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇದ್ದ ಕಾರಣ ಹೈದರಾಬಾದಿನ ವಿವೇಕ ವರ್ಧಿನಿ ಕಾಲೇಜಿನಲ್ಲಿ ಬಿ ಎಸ್ ಸಿ ಯಲ್ಲಿನ ಪ್ರಾಣಿಶಾಸ್ತ್ರ ಪರೀಕ್ಷೆ ನಿನ್ನೆ ರದ್ದಾಯಿತು.

ಜಲಸಮಾಧಿ

ಡಾಕ್ಕಾಕ್ಕೆ ಮೂವತ್ತು ಕೆ ಎಂ ಗಳ ದೂರವಿರುವ ಗಾಜ್ರಿಯಾದ ಕಜುಲಿ ನದಿಯಲ್ಲಿ ಎಂ ಎಲ್ ಬಿಟ್ಟಿ ಎಂಬ ಪ್ರಯಾಣಿಕರ ದೋಣಿ ಮುಳುಗಿ ಇನ್ನೂರಕ್ಕೆ ಮೀರಿ ಜನರು ಜಲಸಮಾಧಿ ಆದರೆಂದೂ ಡಾಕ್ಕಾದಿಂದ ವಾರ್ತೆ ಬಂದಿದೆ.

★

ಅಧಿಕಾರವಿಲ್ಲ

ಕಾವೇರಿ ನೀರು ಪ್ರಶ್ನೆ ತಮಿಳುನಾಡು ಜನತೆಯ ಜೀವನ ಮರಣ ಪ್ರಶ್ನೆ ಆಗಿದೆ ಮತ್ತು ರಾಜ್ಯಕ್ಕೆ ಸಲ್ಲಬೇಕಾದ ನ್ಯಾಯವಾದ ನೀರು ಭಾಗವನ್ನು ಪಡೆಯುವುದರಲ್ಲಿ ಡಿ ಎಂ ಕೆ ಸರ್ಕಾರ ಅಧಿಕಾರವನ್ನು ಸಹ ತ್ಯಜಿಸಲು ಯೋಚಿಸುವುದಿಲ್ಲ ಎಂದು ತಮಿಳುನಾಡಿನ ಕಾವೇರಿ ಇಲಾಖೆ ಮಂತ್ರಿ ಶ್ರೀ ಪಿ. ಪಣ್ಣುಗಂ ತಿರುಚಿಯಲ್ಲಿ 220 ಲಕ್ಷ ರೂ. ವೆಚ್ಚದ ಕಾವೇರಿ ಮೇಲ್ದಂಡೆ ಪ್ರವಾಹ ಸಮನ್ವಯ ಪ್ರಾಜೆಕ್ಟ್ ಉದ್ಘಾಟನೆ ಅಧ್ಯಕ್ಷ ಭಾಷಣ ಮಾಡುತ್ತಾ ತಿಳಿಸಿದರು. ಅವರು ತಮ್ಮ ಭಾಷಣ ಮುಂದುವರಿಸುತ್ತಾ, ಕರ್ನಾಟಕ ಮತ್ತು ತಮಿಳುನಾಡು ಕಾವೇರಿ ಒಪ್ಪಂದ 1974 ಕ್ಕೆ ಮುಗಿಯುವುದು ಎಂದು ನುಡಿದು, ಕಬಿನಿ ನೀರನ್ನು ಮುಟ್ಟುಗೋಲು ಹಾಕಿಕೊಳ್ಳಲು ತಮಗೆ ಅಧಿಕಾರವಿರುವದಾಗಿ ಕರ್ನಾಟಕ ಮುಖ್ಯ ಮಂತ್ರಿಯವರು ಹೇಳಿರುವರೆಂಬ ವರದಿ ಪ್ರಸ್ತಾಪಿಸಿ, ಕರ್ನಾಟಕಕ್ಕೆ ಅಂಥ ಅಧಿಕಾರ ಇಲ್ಲ ಎಂದರು.

★

★ ಮೈಸೂರು ರಾಜ್ಯದಲ್ಲಿ 4000 ವೈದ್ಯ ಹುದ್ದೆಗಳು ಖಾಲಿ ಇವೆ

ಲಾಠಿ ಪ್ರಹಾರ

ರೈಲುಗಳ ಓಡಾಟ ತಪ್ಪಿಸಲು ನುಗ್ಗಿದ ರೈಲು ನೌಕರರ ಮೇಲೆ ನಿನ್ನೆ ಲಾಠಿ ಪ್ರಹಾರ ಹುಬ್ಬಳ್ಳಿಯಲ್ಲಿ ನಡೆಯಿತು.

●

ವೈದ್ಯರಿಗೆ ಎಚ್ಚರಿಕೆ

ಕೆಲಸಕ್ಕೆ ಕಳಿಸಿದ ಹದಿನೈದು ದಿನಗಳಲ್ಲಿ ಕೆಲಸಕ್ಕೆ ಹಾಜರಾಗದಿದ್ದರೆ ಕೆಲಸದಿಂದ ತಕ್ಷಣ ಸಸ್ಪೆಂಡು ಮಾಡಲಾಗುವದೆಂದು ಆರೋಗ್ಯ ಮಂತ್ರಿ ಶ್ರೀ ಹೆಜ್. ಸಿದ್ಧವೀರಪ್ಪನವರು ಎಚ್ಚರಿಸಿರುವರು.

★

ವಿಶ್ವಾರ ಆಶ್ವಾಸನೆ

ಲೋಕಸಭೆಯಲ್ಲಿ ನಿನ್ನೆ ನಿಲುವಳಿ ಸೂಚನೆ ಮೇಲೆ ರೈಲ್ವೆ ಮಂತ್ರಿ ಶ್ರೀ ಎಲ್ ಎನ್. ಮಿಶ್ರರವರು, ಶ್ರೀ ಜಾರ್ಜ್ ಫರ್ನಾಂಡೀಸ್ ಮತ್ತಿತರ ರೈಲ್ವೆ ನಾಯಕರ ಬಂಧನವನ್ನು ಸಮರ್ಥಿಸುತ್ತಾ, ಮುಷ್ಕರದ ನೋಟೀಸ್ ವಾಪಸು ಪಡೆದರೆ, ಬಂಧಿತ ರೈಲ್ವೆ ನಾಯಕರ ಬಿಡುಗಡೆ ಮಾಡುವುದಾಗಿಯೂ, ಸಂಧಾನ ಪರಂಭಿಸುವುದಾಗಿಯೂ ತಿಳಿಸಿದರು. ಅವರು ತಮ್ಮ ಭಾಷಣ ಮುಂದುವರಿಸುತ್ತಾ, ಜಾರ್ಜ್ ಫರ್ನಾಂಡೀಸ್‌ರವರು ಸಂಧಾನದಲ್ಲಿ ನಿರೋಧಿ ಧೋರಣೆ ತೋರಿಸಿದರೆಂದು, ರೈಲ್ವೆ ಕೆಲಸಗಾರರನ್ನು ಹಿಂಸೆಗೆ ಪ್ರಚೋದಿಸಿದರೆಂದು ತಿಳಿಸಿದರು.

★

★ ರೈಲ್ವೆ ನಾಯಕರ ಬಂಧನ ಮತ್ತು ಪೋಲೀಸರ ಬಂಧನದಲ್ಲಿದ್ದು ಮೃತಪಟ್ಟ ಶ್ರೀ ವಿ. ಆರ್. ವಣಾಲಗಿಯವರ ನಿಧನದ ಬಗ್ಗೆ ವ್ಯಸನ ಸೂಚಿಸಲು ವಿಶಾಲ ಬೊಂಬಾಯಿ ಥಾನಾದಲ್ಲಿ ಬಂದ್ ಏರ್ಪಾಟಾಗಿದೆ.

●

★ ಪೋಲೀಸು ನೌಕರರಿಗೆ ಒಗೆ ಹಾಗೂ ಒಟ್ಟೆ ಭತ್ಯೆಯನ್ನು ಕರ್ನಾಟಕ ಸರಕಾರ ಹೆಚ್ಚಿಸಿದೆ.

ಈ ತಿಂಗಳಿನ ಸಕ್ಕರೆ

ಮೈಸೂರು ರಾಜ್ಯ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ ವಿವಿಧ ಜಿಲ್ಲೆಗಳಲ್ಲಿ ಮೇ ತಿಂಗಳಿಗಾಗಿ 99,175 ಕ್ವಿಂಟಾಲು ಸಕ್ಕರೆಯನ್ನು ನಿಗದಿ ಮಾಡಿದೆ. ಈ ಪೈಕಿ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಕ್ರಮವಾಗಿ 7,326 ಮತ್ತು 6,730 ಕ್ವಿಂಟಾಲು ಪಡೆಯುವುವು.

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಟೆಂಡರ್ ಪ್ರಕಟಣೆ

ನಂ. 1/74-75 ತಾ॥ 16-4-1974

ಕಬಿನಿ ಕಾಲನಿಯಲ್ಲಿ ಇರುವ, ಕಬಿನಿ ಜಲಾಶಯ ವಿಭಾಗದ, ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರಿಂದ, ಸೂಕ್ತ ವರ್ಗದ ಅರ್ಹರಾದ ಕಂಟ್ರಾಕ್ಟರ್ ವರ್ಗದಿಂದ ರಿಜಿಸ್ಟರ್ ಆದ ಕಂಟ್ರಾಕ್ಟರ್‌ಗಳಿಂದ ದ್ವಿಪ್ರತಿಗಳಲ್ಲಿ ಪ್ರತ್ಯೇಕ ಮೊಹರಾದ ಶೇಕಡವಾರು ಟೆಂಡರ್‌ಗಳು ಆಹ್ವಾನಿಸಲ್ಪಟ್ಟಿವೆ.

ಕಛೇರಿ ಕೆಲಸದ ವೇಳೆಗಳಲ್ಲಿ 13-5-74 ರಿಂದ 16-5-1974 ರ ವರೆಗೆ ಅಪೇಕ್ಷಿಸುವ ಟೆಂಡರ್ ದಾರರಿಗೆ ಖಾಲಿ ಟೆಂಡರ್ ಫಾರಂಗಳನ್ನು ಕೊಡಲಾಗುವುದು. 18-5-1974 ರ ಮಧ್ಯಾಹ್ನ 4 ಗಂಟೆ ವರೆಗೆ ಮೊಹರಾದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು ಮತ್ತು ಅವನ್ನು ಅದೇ ತಾರೀಖಿನಲ್ಲಿ ಅಥವಾ ಎಕ್ಸಿಕ್ಯೂಟೀವ್-ಇಂಜಿನಿಯರ್‌ರವರಿಗೆ ಅನುಕೂಲವಾದ ಮತ್ತಾವುದಾದರೂ ತಾರೀಖಿನಲ್ಲಿ ಮಧ್ಯಾಹ್ನ 4-30 ಗಂಟೆಗೆ ಹಾಜರಿರುವ ಕಂಟ್ರಾಕ್ಟರ್‌ಗಳ ಮುಂದೆ ಒಡೆಯಲಾಗುವುದು.

ಕೆಲಸದ ಎಲ್ಲ ದಿನಗಳಲ್ಲಿ ಕಛೇರಿ ಕೆಲಸದ ವೇಳೆಗಳಲ್ಲಿ ಮತ್ತಾವುದಾದರೂ ವಿವರಗಳನ್ನು ಪಡೆಯಬಹುದು.

ಸೀ. ನಂ.	ಕೆಲಸದ ಹೆಸರು	ಟೆಂಡರ್‌ಗೆ ಇಟ್ಟಿರುವ ಮೊತ್ತ	ಇ ಎಂ ಡಿ	ಟೆಂಡರ್ ಫಾರಂ ದರ	ಕಾಲಾವಧಿ
	ಕಬಿನಿ ಜಲಾಶಯ ಪ್ರಾಜೆಕ್ಟ್ ಕೆಲಸಗಳು				
		ರೂ	ರೂ	ರೂ	
1	ಕಬಿನಿ ಅಣೆಕಟ್ಟಿನ ಎಡಗಡೆಯ ಕೊನೆಯ ಪ್ರವೇಶದಲ್ಲಿ ಒಂದು ಸರ್ಕಲ್ ನಿರ್ಮಿಸುವುದು	30,961	774	10	8 ತಿಂಗಳು
2	95/56 ರಿಂದ 57 ರ ವರೆಗೆ ಬಲಗಡೆ ಏರಿ ಮೇಲೆ ಪ್ಯಾರಾಪಟ್ ಒದಗಿಸುವುದು	1,03,068	2577	10	6 ತಿಂಗಳು
3	ಗ್ರೇಡ್ ವೈ/55 ರಿಂದ 29/7 ರ ವರೆಗೆ ಎಡಗಡೆ ಏರಿ ಮೇಲೆ ಪ್ಯಾರಾಪಟ್ ನಿರ್ಮಿಸುವುದು	1,59,651	3992	30	8 ತಿಂಗಳು
4	ಗ್ರೇಡ್ 77/7 ರಿಂದ ಸಹೆಚ್ 3110 ಪ್ಲಸ್ 21.25 ರ ವರೆಗೆ ಎಡಗಡೆ ಏರಿ ಮೇಲೆ ಪ್ಯಾರಾಪಟ್ ನಿರ್ಮಿಸುವುದು	1,10,765	2770	30	8 ತಿಂಗಳು
5	ಕಬಿನಿ ಅಣೆಕಟ್ಟಿನ ಮೇಲೆ (ಮಧ್ಯ ಕಲ್ಲು ಕಟ್ಟಡದ) ಅಣೆಕಟ್ಟಿನ ಭಾಗ, ಕಲ್ಲು ಕಟ್ಟಡ ಪ್ಯಾರಾಪಟ್ ನಿರ್ಮಿಸುವುದು	1,22,127	4803	30	6 ತಿಂಗಳು

ಸಹಿ/-
ಎಕ್ಸಿಕ್ಯೂಟೀವ್ ಇಂಜಿನಿಯರ್,
ಕಬಿನಿ ಜಲಾಶಯ ವಿಭಾಗ.

ವುಡ್‌ಲಾಂಡ್ 3574 ರಿಂದ
ಅಮೋಘ 2 ನೇ ವಾರ
ಉಪಾನೆ

ಕನ್ನಡ ಕಲರ್ ಮಹೋನ್ನತ ಚಿತ್ರ ದಿನ 3 ಪ್ರದರ್ಶನಗಳು

ಪಾತ್ರ : ಅರತಿ ಡಾ॥ ಮಣ್ಣೂರ್ ಶಿವರಾಂ ಕೆ. ಎಸ್. ಅಶ್ವತ್ಥ್, ಲೀಲಾವತಿ ಮುಂತಾದವರು ದಿಗ್ದರ್ಶನ : ಎಸ್. ಆರ್. ಪುಟ್ಟಣ್ಣ ಕಣಗಾಲ್

25-4-74 ರಿಂದ ಬಾಲ್ಕನಿ ತರಗತಿಗಳಿಗೆ ಮಾತ್ರ ಮುಂಚಿತವಾಗಿ ಟಿಕೆಟ್ ಕೊಡಲಾಗುವುದು ದಿನ ಬೆಳಿಗ್ಗೆ 10-30 ರಿಂದ 11-30 ರ ವರೆಗೆ

ಅಪೆರಾ 26 4 74 ರಿಂದ
ನಾಗ್ ಮೋರೆ ಸಾಥಿ

- ರೋಮಾಂಚಕಾರಿ ಹಿಂದಿ ವರ್ಣ ಚಿತ್ರ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Protect the Cow

Edited Printed and Published by Dharmapracharanirata M S. Krishna Rao (Proprietor) at the Satvavadi Press, Chamarajapuram Mysore